ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಹಣ ದುರುಪಯೋಗ

೩೦೪೮. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೬-೬೭, ೧೯೬೭-೬೮ರಲ್ಲಿ ದಕ್ಷಿಣ ಕನ್ನಡ ಸಹಕಾರ ಸಂಘ ಸಂಸ್ಥೆಗಳಲ್ಲಿ ಹಣ ದುರುಪಯೋಗದ ವಂಚನೆ ಪ್ರಕರಣಗಳಾಗಿರುವುದು ನಿಜವೇ ?

ಆ) ಅಂತಹ ಪ್ರಕರಣಗಳು ಜಿಲ್ಲೆಯಲ್ಲಿ ಎಲ್ಲೆಲ್ಲಿ ಆಗಿವೆ ಹಾಗೂ ಅದನ್ನು ಕುರಿತು ದಾವೆಗಳಾಗಿದೆಯೋ ?

ಇ) ದುರುಪಯೋಗ, ವಂಚನೆ ಹಣದ ವಸೂಲಾತಿ ಆಗಿದೆಯೇ ಅಥವಾ ಶಿಕ್ಷೆ ಆಗಿದೆಯೇ ?

ಈ) ಅಂತಹ ವಂಚನೆಗಳು ಪುನಃ ಮರುಕಳಿಸದಂತೆ ಸರ್ಕಾರ ತೆಗೆದುಕೊಳ್ಳುವ ಮುಂಜಾಗ್ರತೆ ಕಾರ್ಯಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಅಂತಹ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ಕಂಡು ಬಂದಿರುತ್ತದೆ.

ತಾಲ್ಲೂಕು	ಪ್ರಕರಣಗಳ ಸಂಖ್ಯೆ
ಮಂಗಳೂರು	೫
ಪುತ್ತೂರು	೧೪
ಬಂಟ್ವಾಳ	೪
ಸುಳ್ಯ (೧೦+೧)	೧೧
ಕುಂದಾಪುರ	೪
ಉಡುಪಿ	೩೭
ಒಟ್ಟು	೭೫

ರೂ. ೭೫ ಹಣ ದುರುಪಯೋಗ ಪ್ರಕರಣಗಳ ಪೈಕಿ ೪ ಹಣ ದುರುಪಯೋಗ ಪ್ರಕರಣಗಳಲ್ಲಿ (ರೂ. ೧,೧೬,೭೩೦-೧೮ಕ್ಕೆ) ಸಿವಿಲ್ ದಾವೆಯನ್ನು ೬ ಹಣ ದುರುಪಯೋಗ ಪ್ರಕರಣಗಳಲ್ಲಿ (ರೂ. ೪,೬೪,೩೩೪-೨೬ಕ್ಕೆ) ಕ್ರಿಮಿನಲ್ ಮೊಕದ್ದಮೆಯನ್ನು ಜರುಗಿಸಲಾಗಿದೆ.

ಇ) ೧೬ ಹಣ ದುರುಪಯೋಗ ಪ್ರಕರಣ ಪೈಕಿ ಕೆಲವು ಪ್ರಕರಣಗಳಲ್ಲಿ ಹಣವು ಭಾಗಶಃ ಹಾಗೂ ಕೆಲವು ಪ್ರಕರಣಗಳಲ್ಲಿ ಹಣವು ಪೂರ್ತಿ ವಸೂಲಾತಿಯಾಗಿರುತ್ತವೆ.

ಕ್ರಿಮಿನಲ್ ಕ್ರಮ ಜರುಗಿಸಿರುವ ೬ ಪ್ರಕರಣಗಳು ತನಿಖೆಯಂ ಹಂತದಲ್ಲಿರುವುದರಿಂದ ಶಿಕ್ಷೆ ವಿಧಿಸಿರುವುದಿಲ್ಲ.

ಈ) ಸರ್ಕಾರವು ತನ್ನ ಪತ್ರ ಸಂಖ್ಯೆ ; ಸಿಎಂಡಬ್ಲ್ಯು ೬೩ ಸಿಎಲ್‌ಎಂ ೬೮, ದಿನಾಂಕ ; ೨೭-೪-೧೯೬೮ರಲ್ಲಿ ಸಹಕಾರ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸಹಕಾರ ಸಂಘದಲ್ಲಿ ಹಣ ದುರುಪಯೋಗ, ಹಣ ದುರ್ವಿನಿಯೋಗ ಪ್ರಕರಣಗಳು ಬೆಳಕಿಗೆ ಬಂದಿರುವಲ್ಲಿ ೩೦-೬-೧೯೬೮ರ ಒಳಗೆ ಕ್ರಮ ಕೈಗೊಳ್ಳಬೇಕೆಂದು ಕಟ್ಟಪ್ಪಣೆ ವಿಧಿಸಿದೆ. ಇಲಾಖಾಧಿಕಾರಿಗಳು ಅಂತಹ ಪ್ರಕರಣಗಳಲ್ಲಿ ವಸೂಲಾತಿಗೆ ಸಿವಿಲ್ ಕ್ರಮ ಮತ್ತು ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಎಲ್ಲಾ ಅರ್ಹ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡತಕ್ಕದ್ದೆಂದು, ಸರ್ಕಾರಿ ಇಲಾಖಾ ನೌಕರರು ಅಥವಾ ಸಂಘದ ನೌಕರರ

ದುರುಪಯೋಗ ಮಾಡಿದ್ದಲ್ಲಿ ಜೊತೆಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂತಲೂ ಮತ್ತು ಅಧಿಕಾರೇತರರು ದುರುಪಯೋಗ ಮಾಡಿದ್ದಲ್ಲಿ ಅವರ ಮೇಲೆ ಸಿವಿಲ್ ಕ್ರಿಮಿನಲ್ ಕ್ರಮದ ಜೊತೆಗೆ ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೧೨೬ (ಎ) ಅನ್ವಯ ಕ್ರಮ ತೆಗೆದುಕೊಳ್ಳತಕ್ಕದೆಂದು ಮತ್ತು ಅವರನ್ನು ಜವಾಬ್ದಾರರನ್ನಾಗಿ ಮಾಡುವಂತೆಯೂ ಆದೇಶ ನೀಡಲಾಗಿದೆ.

ಸರೋಜಿನಿ ಮಹಿಷಿಯವರ ವರದಿ

೧೫೧೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀಮತಿ ಸರೋಜಿನಿ ಮಹಿಷಿಯವರ ವರದಿ ಯಾವ ಹಂತದಲ್ಲಿದೆ ?

ಆ) ಸದರಿ ವರದಿಯನ್ನು ಶೀಘ್ರವಾಗಿ ಜಾರಿಗೊಳಿಸಲಾಗುವುದೇ ?

ಇ) ಸರ್ಕಾರದವರು ಸದರಿ ವರದಿಯ ಶಿಫಾರಸ್ಸುಗಳನ್ನು ಪರಿಶೀಲಿಸಲು ಇನ್ನೊಂದು ಸಮಿತಿಯನ್ನು ಸಂಸತ್ ಸದಸ್ಯರಾದ ಡಾ. ವಿ. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ರಚಿಸಿರುವುದು ನಿಜವೇ. ಹಾಗಿದ್ದಲ್ಲಿ, ಅದರ ಕಾರ್ಯ ಎಲ್ಲಿಯವರೆಗೆ ಬಂದಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ), ಆ) ಮತ್ತು ಇ) ಡಾ. ಸರೋಜಿನಿ ಮಹಿಷಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಕ್ರಮದ ಮೇಲ್ವಿಚಾರಣೆ ಗೋಸ್ಕರ ಮತ್ತು ಆ ಶಿಫಾರಸುಗಳಿಂದ ಉದ್ಭವಿಸಬಹುದಾದ ಇತರ ಅಂಶಗಳನ್ನು ಪರಿಶೀಲಿಸುವುದ ಕ್ಕೋಸ್ಕರ ಸರ್ಕಾರವು ಡಾ. ವಿ. ವೆಂಕಟೇಶ್, ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ ೧೯-೫-೮೮ರಂದು ಅಸ್ತಿತ್ವಕ್ಕೆ ಬಂದಿದೆ ಹಾಗೂ ಇತ್ತೀಚೆಗೆ ಈ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ಮಧ್ಯಕಾಲಿಕ ವರದಿಯಲ್ಲಿನ ಶಿಫಾರಸ್ಸುಗಳು ಸರಕಾರದ ಪರಿಶೀಲನೆಯಲ್ಲಿವೆ.

ಕಂಕನಾಡಿ ತಲಪಾಡಿ ಹೆದ್ದಾರಿ ಅಪಘಾತಗಳು

೩೦೫೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರಿನ ಕಂಕನಾಡಿಯಿಂದ ಕೇರಳದ ಗಡಿ ತಲಪಾಡಿವರೆಗಿನ ೧೬ ಕಿ. ಮೀ. ಹೆದ್ದಾರಿಯಲ್ಲಿ ೧೯೮೫-೮೬, ೧೯೮೬-೮೭, ೧೯೮೭-೮೮ರಲ್ಲಿ ಸಂಭವಿಸಿದ ವಾಹನ ಅಪಘಾತಗಳೆಷ್ಟು?

ಆ) ಇದರಿಂದ ಆಗಿರುವ ಜೀವ ಹಾನಿಗಳೆಷ್ಟು ? ತೀವ್ರತರ ಅಪಘಾತಕ್ಕೆ ಬಲಿಯಾಗಿ ಚಿಕಿತ್ಸೆ ಪಡೆದವರೆಷ್ಟು ?

ಇ) ಈ ಕಿರಿದಾದ ಪ್ರಮಾಣದ ಪ್ರಯಾಣದಲ್ಲಿ ಸಂಭವಿಸುವ ವಾಹನ ಅಪಘಾತಗಳನ್ನು ತಪ್ಪಿಸಲು ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿರುವರೇ ?

ಈ) ವಾಹನಗಳ ಚಾಲಕರಿಗೆ ಸೂಕ್ತ ನೇಮ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಪಹರೆ ಹಾಕಲಾಗುವುದೆ ?